ಇ) 1991-92ನೇ ಸಾಲಿನಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ಮುಂಡರಗಿ ತಾಲ್ಲೂಕು ಮೇವುಂಡಿ ಹಳ್ಳಕ್ಕೆ ಪ್ರವಾಹ ಬಂದು ರಸ್ತೆ ದುರಸ್ತಿ ಮಾಡಿಸುವುದು.

2577 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಲೋಕೋಪಯೋಗಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಮೇವುಂಡಿ ಹಳ್ಳಕ್ಕೆ ಪ್ರವಾಹ ಬಂದು ರಸ್ತೆ ಮೂರು ದಿನಗಳಿಂದ ಬಂದಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) ಸಧ್ಯದಲ್ಲಿ ಇರುವ ಕಾಸ್‌ವೇ ಬದಲು 15 ಲಕ್ಷ ರೂ.ಗಳ ಅಂದಾಜಿನಲ್ಲಿ ಸೇತುವೆ ನಿರ್ಮಿಸುವ ಪ್ರಸ್ತಾಪವು ಪರಿಶೀಲನೆಯಲ್ಲಿದೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಮಿನಿ ಸ್ಟೇಡಿಯಮ್ ನಿರ್ಮಾಣ

2585 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಮಿನಿ ಸ್ಟೇಡಿಯಂ ಕಟ್ಟಲು ಜಾಗ ಕಾದರಿಸಿ ಈ ಬಗ್ಗೆ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಇದನ್ನು ಕಾರ್ಯಗತ ಮಾಡಲು ಕೈಗೊಂಡ ಕ್ರಮವೇನು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) : :

ಅ) ಇಲ್ಲ, ಆದರೆ ಮೂಡಿಗೆರೆ ತಾಲ್ಲೂಕು ಕಳಸಾ ಹೋಬಳಿಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವ ಬಗ್ಗೆ ಮನವಿ ಬಂದಿರುತ್ತದೆ.

ಆ) ಮೂಡಿಗೆರೆ ತಾಲ್ಲೂಕಿನ ಕಳಸಾ ಹೋಬಳಿಯಲ್ಲಿ ಒಂದು ಆಟದ ಮೈದಾನದ ಅಭಿವೃದ್ಧಿಗಾಗಿ ರೂ.1.00 ಲಕ್ಷವನ್ನು ಮಂಜೂರು ಮಾಡುವಂತೆ ಕೋರಲಾಗಿದೆ. ಆದರೆ ಹೋಬಳಿ ಮಟ್ಟದ ಕ್ರೀಡಾಂಗಣ ನಿರ್ಮಾಣ ಮಾಡುವ ಯೋಜನೆಗಳು ಸರ್ಕಾರದ ಮಟ್ಟದಲ್ಲಿ ಇಲ್ಲ.

ಉಡುಪಿ ತಾಲ್ಲೂಕು ಸಾಸ್ತಾನ ಮಂಡಲ ಸೊಲ್‌ಕುದ್ರುವಿಗೆ ರಸ್ತೆ ಸಂಪರ್ಕ

2777 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಸಾಸ್ತಾನ ಮಂಡಲದಲ್ಲಿ ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಮಾಬುಕಳದ ಹತ್ತಿರ ಸೀತಾನದಿ ಮಧ್ಯದಲ್ಲಿರುವ 'ಸೊಲ್‌ಕುದ್ರು' ಇದಕ್ಕೆ ರಾಷ್ಟ್ರೀಯ ಹೆದ್ದಾರಿಯಿಂದ ಪೂರ್ವಾಭಿಮುಖವಾಗಿ ಪಾಪನ ಓಡಾಟಕ್ಕೆ ಅನುಕೂಲವಾಗುವಂತಹ ಕಚ್ಚಾ ರಸ್ತೆ ಸಂಪರ್ಕ ಕಲ್ಪಿಸಿಕೊಡುವಂತೆ ಗ್ರಾಮಸ್ಥರ ಬೇಡಿಕೆಯೇನಾದರೂ ಬಹಳ ದಿನದಿಂದ ಉಳಿದಿದೆಯೇ?

ಆ) ಹಾಗಿದ್ದಲ್ಲಿ ಈ ಕುದ್ರುಗೆ ರಸ್ತೆ ಸಂಪರ್ಕ ಕಲ್ಪಿಸಿಕೊಡುವಲ್ಲಿ ಉಂಟಾಗುವ ತೊಂದರೆಗಳೇನು, ಪರ್ಯಾಯ ಮಾರ್ಗಗಳನ್ನು ಅನುಸರಿಸಿ ಗ್ರಾಮಸ್ಥರ ಬೇಡಿಕೆ ಈಡೇರಿಸುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಬಹುದೆ?

ಶ್ರೀ ಜಿ.ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಸಚಿವರು):

ಅ) ಇದೆ.

ಆ) ಪ್ರಸ್ತಾಪವು ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತಿದ್ದು ಈ ರಸ್ತೆ ಮಾಡಲು 5.00 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಜಿಲ್ಲಾ ಪರಿಷತ್ತಿನ ಮುಂದಿನ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಲು ಸೂಚನೆಗಳನ್ನು ನೀಡಲಾಗುವುದು.

ನಿಜಾಮಶಾಹಿ ಆಡಳಿತದಲ್ಲಿ ತೋಡಿಸಲಾದ ಬಾವಿಗಳ ಸಂಖ್ಯೆ

2584 - ಶ್ರೀ ಹೆಚ್.ಎಸ್. ಪಾಟೀಲ್ (ಕುಷ್ಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಜಾಮಶಾಹಿ ಆಡಳಿತದಲ್ಲಿ ಬಾವಿ ತೋಡಿಸಲು ಒಂದು ಉದ್ದೇಶ ಇಲಾಖೆಯನ್ನು ರಚಿಸಲಾಗಿತ್ತೇ; ಹಾಗಿದ್ದಲ್ಲಿ ಈ ಇಲಾಖೆಯಿಂದ ತೋಡಲಾಗಿರುವ ಬಾವಿಗಳ ಸಂಖ್ಯೆ ಎಷ್ಟು?

ಆ) ಸ್ಥಳೀಯವಾಗಿ ಈ ಬಾವಿಗಳಿಗೆ ಮನ್ನಾ ಸಾಹೇಬರ ಬಾವಿಗಳೆಂದು ಕರೆಯಲಾಗುತ್ತಿದ್ದು ಕ್ಯಾಪ್ಟನ್ ಮನೆ ಸಮಾದಿ ರಾಯಚೂರು ಜಿಲ್ಲೆಯ ಲಿಂಗಸುಗೂರು (ಭಾವಣಿ) ಪುರಸಭೆ ವ್ಯಾಪ್ತಿಯಲ್ಲಿದೂ ದುರಾವಸ್ಥೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸರಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಹಾಗಿದ್ದಲ್ಲಿ ಉಪಯೋಗದಲ್ಲಿರುವ ಸದರಿ ಬಾವಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿ ಎಷ್ಟು ಖಾಸಗಿ ವ್ಯಕ್ತಿಗಳ ಒಡೆತನಕ್ಕೆ ಸೇರಿವೆ, (ತಾಲ್ಲೂಕುವಾರು ಪಟ್ಟಿಯನ್ನೊದಗಿಸುವುದು)

ಈ) ಕುಡಿಯುವ ನೀರಿಗಾಗಿ ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ಸರ್ಕಾರ ಪ್ರಾರಂಭಿಸುವ ಆಲೋಚನೆಯೇನಾದರೂ ಸರ್ಕಾರಕ್ಕಿದೆಯೇ?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಮಂತ್ರಿಗಳು) :

ಅ) ಹೌದು. ಈ ಇಲಾಖೆಯಿಂದ ಒಟ್ಟು ತೋಡಿದ ಬಾವಿಗಳ ಸಂಖ್ಯೆ ಲಭ್ಯವಿರುವುದಿಲ್ಲ. ಲಿಂಗಸುಗೂರು ತಾಲ್ಲೂಕಿನಲ್ಲಿ ಸುಮಾರು 130 ಬಾವಿಗಳಿವೆ.

ಆ) ಇದು ಪುರಸಭೆಯ ವ್ಯಾಪ್ತಿಯಲ್ಲಿ ಬರುತ್ತದೆ.

ಇ) ಲಿಂಗಸುಗೂರು ತಾಲ್ಲೂಕಿನಲ್ಲಿ ಉಪಯೋಗದಲ್ಲಿರುವ ಬಾವಿಗಳ ಸಂಖ್ಯೆ ಸುಮಾರು 109. ಅವುಗಳ ಒಡೆತನದ ಬಗ್ಗೆ ಬೇಕಾದ ಮಾಹಿತಿ ಲಭ್ಯವಿರುವುದಿಲ್ಲ.

ಈ) ಸಾರ್ವಜನಿಕ ಆರೋಗ್ಯ ತಾಂತ್ರಿಕವಲಯ, ಈಗಾಗಲೇ ಇದೆ.

ಪಾಣೆ ಮಂಗಳೂರು ಸೇತುವೆ ನಿರ್ಮಾಣ

2559 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?